ಅಗ್ನಿದಿವ್ಯಗಳಂತೂ ಬೆಚ್ಚಿಬೀಳಿಸುವಂತಿದ್ದು, ಕಲೆಯ ಯಾವುದೇ ಹಿನ್ನೆಲೆ ಇರದಂಥ ಓದುಗನನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವಷ್ಟು ಪರಿಣಾಮಕಾರಿಯಾಗಿವೆ.

ಇಡೀ ಕೃತಿಯಲ್ಲಿ ಫ್ರಾನ್ಸಿನ ಕಲಾವಿದರಿಗೆ ಹೆಚ್ಚಿನ ಮನ್ನಣೆ ದೊರೆತಿದೆ. ಅಂತೆಯೇ ಎಂದಿನಂತೆ ಗಂಡಸರಿಗೇ ಸಿಂಹಪಾಲು ದೊರೆತಿದೆ. ಕೃತಿಯಲ್ಲಿ ಸ್ಥಾನ ಪಡೆದಿರುವ ಬೆರಳೆಣಿಕೆಯ ಕಲಾವಿದೆಯರಾದ ಏಂಜೆಲಿಕಾ ಕೌಫ್‌ಮನ್, ಮೇರಿ ಕ್ಯಾಸಟ್, ಜಾರ್ಜಿಯಾ ಓ ಕೀಫ್, ಫ್ರೀಡಾ ಕಹ್ಲೋ ಮತ್ತು ಅಮೃತಾ ಶೇರ್‌ಗಿಲ್ ಇವರು ಯಾವ ಪುರುಷ ಕಲಾವಿದನಿಗೂ ಕಡಿಮೆಯಿಲ್ಲದಂತೆ ತಮ್ಮ ಪ್ರತಿಭಾವಿಲಾಸಗಳನ್ನು ಪ್ರಕಟಿಸಿದ್ದಾರಲ್ಲದೆ ನೋಡುಗರನ್ನು ಇನ್ನಿಲ್ಲದಂತೆ ಆಲೋಚಿಸಲೂ ಹಚ್ಚಿದ್ದಾರೆ.

ಪುರುಷಾಧಿಪತ್ಯದ 18ನೇ ಶತಮಾನದಲ್ಲೇ ಕಲಾಪ್ರಪಂಚದಲ್ಲಿ ತನ್ನ ಛಾಪು ಮೂಡಿಸಿದ ನಿಯೋಕ್ಲಾಸಿಸಿಸಂ ಪಥದ ಏಂಜಲಿಕಾ ಕೌಫಮನ್ ಮತ್ತು ಸ್ತ್ರೀವಾದಿ ಹೋರಾಟಗಾರ್ತಿಯೂ ಆದ ಇಂಪ್ರೆಶನಿಸಂ ಪಥದ ಮೇರಿ ಕ್ಯಾಸೆಟ್ಟ ಇವರ ಚಿತ್ರಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಪ್ರಾಮುಖ್ಯತೆ ಪಡೆದಿದ್ದಾರೆ. 98 ವರ್ಷ ಬಾಳಿದ ಜಾರ್ಜಿಯಾ ಓ ಕೀಫ್ ಅವರ ಮಾಡರ್ನಿಸ್ಟ್ ಕೃತಿಗಳು ಚೇತೋಹಾರಿ ಅನುಭವ ನೀಡುತ್ತಲೇ ವಿಚಾರಪ್ರಚೋದನೆಗೊಡ್ಡಿದರೆ; ಕೇವಲ 47ರ ಪ್ರಾಯದಲ್ಲಿ ಬದುಕು ಮುಗಿಸಿದ ಫ್ರೀಡಾ ಕಹ್ಲೋರ ಕೃತಿಗಳು ಆಕೆಯ ಆತ್ಮಚರಿತ್ರೆಯ ಬೀಭತ್ಸ ಚಿತ್ರಣಗಳಾಗಿ ಜುಗುಪ್ಸೆಯ ಭಾವವನ್ನು ಉದ್ದೀಪಿಸುತ್ತವೆ. ಕೇವಲ ಇಪ್ಪತ್ತೆಂಟು ವರ್ಷಕ್ಕೆ ಚಿತ್ರಯಾತ್ರೆ ಮುಗಿಸಿದ ಅಮೃತಾ ಶೇರ್‌ಗಿಲ್‌ರ ಜೀವನ ಮತ್ತು ಚಿತ್ರಗಳು ವಿಷಾದ ಭಾವವನ್ನುಂಟು ಮಾಡುತ್ತವೆ. ಹೋಲಿಸಿ ನೋಡಿದರೆ ಮೇರಿ ಕ್ಯಾಸೆಟ್ಟ ನಿರ್ದಿಷ್ಟವಾಗಿ ಹೆಣ್ಣಿನ ಮೂಲಕ ಮತ್ತು ಜಾರ್ಜಿಯಾ ಓ ಕೀಫ್ ವಿಶಾಲಾರ್ಥದಲ್ಲಿ ಪ್ರಕೃತಿಯ ಮೂಲಕ ಕಂಡರಿಸಲು ಪ್ರಯತ್ನಿಸಿರುವುದು 'ತಾಯ್ತನ'ವನ್ನೇ ಎನಿಸುತ್ತದೆ.

ಅದೇ ರೀತಿಯಾಗಿ ಕಾಲ-ದೇಶ-ಪಂಥಾತೀತವಾಗಿ ಸಾಮಾನ್ಯವಾಗಿ ಪುರುಷ ಕಲಾವಿದರ ಚಿತ್ರಗಳಲ್ಲಿ ಹೆಂಗಸರ ನಗ್ನತೆಗೂ, ಮಹಿಳಾ ಕಲಾವಿದರ ಚಿತ್ರಗಳಲ್ಲಿ ಹೆಂಗಸರ ಭಾವಾಭಿವ್ಯಕ್ತಿಗೂ ಹೆಚ್ಚಿನ ಪ್ರಾಧಾನ್ಯತೆ ದೊರೆತಿರುವುದು ಕಾಣಿಸುತ್ತದೆ. ಕಲಾವಿದೆ ಫ್ರೀಡಾ ಕಹ್ಲೋ ಅವರ ಚಿತ್ರಗಳಲ್ಲಿ ಹೆಣ್ಣಿನ ನಗ್ನತೆಯ ಚಿತ್ರಣವಿದ್ದರೂ, ಅದು ಗಂಡಿನ ಆಸೆಕಂಗಳ ನೋಟದಿಂದ ಉದಿಸಿದ ರೀತಿಯದ್ದಾಗಿರದೆ, ಹೆಣ್ಣಿನ ದುಃಖಾರ್ತ ಕಂಗಳ ನೋಟದಿಂದ ಉದಿಸಿದ ರೀತಿಯದ್ದಾಗಿದೆ. ಕಲಾವಿದೆ ಜಾರ್ಜಿಯಾ ಓ ಕೀಫ್ ಅವರ, ಹೂವನ್ನು ವಸ್ತುವಾಗಿಸಿಕೊಂಡ 'ಬ್ಲ್ಯಾಕ್ ಐರಿಸ್' ಕೃತಿಯು, ವಿಮರ್ಶಕ ಲಿಂಡಾ ನೊಚ್ಲಿನ್ ಅವರ ಪುರುಷ ಕಣ್ಣಿಗೆ ಯೋನಿಯ ರೂಪಕವಾಗಿ ಕಾಣಿಸುತ್ತದೆ. ಮತ್ತು ಆತನ ಆ ಪ್ರತಿಕ್ರಿಯೆಗೆ ಆಕೆ 'ಅದು ಹೂವು ಮಾತ್ರ' ಎಂದು ಸ್ಪಷ್ಟಪಡಿಸಬೇಕಾಗುತ್ತದೆ. ನಗ್ನತೆಯ ಕುರಿತ ಪುರುಷ ಮತ್ತು ಮಹಿಳೆಯರ ದೃಷ್ಟಿಕೋನಗಳ ವ್ಯತ್ಯಾಸಕ್ಕೆ ಇದನ್ನೊಂದು ಪುರಾವೆಯಾಗಿಯೂ ನೋಡಲು ಸಾಧ್ಯವಿದೆ.

ಈ ಕೃತಿಯಲ್ಲಿ 19ನೇ ಶತಮಾನ ಮತ್ತು ಅದರ ನಂತರದ ಕಲಾಪಥಗಳ ಬಗ್ಗೆ ಬರೆಯುವಾಗ ಲೇಖಕರ ಲೇಖನಿಗೆ ಇನ್ನಿಲ್ಲದ ಕಸುವು ಒದಗಿಬಂದಿದೆ. ಅದರಲ್ಲೂ ಮೇರಿ ಕ್ಯಾಸೆಟ್, ಜೀನ್ ಫ್ರಾಂಕೋಯಿಸ್ ಮಿಲ್ಲೆಟ್, ಎಡ್ವರ್ಡ್ ಮುಂಕ್, ವಾಸಿಲಿ ಕ್ಯಾಂಡಿನಸ್ಕಿ, ನಂದಲಾಲ್ ಬೋಸ್ ಮುಂತಾದವರ ಬರಹಗಳು ಅತ್ಯಂತ ಉಜ್ವಲವಾಗಿ ಮೂಡಿಬಂದಿವೆ. ಕೃತಿಯುದ್ದಕ್ಕೂ ಲೇಖಕರ ಶ್ರಮ ಮತ್ತು ಶ್ರದ್ಧೆ ಎದ್ದು ಕಾಣುವಂತಿದೆ. ಕಣ್ಬಗೆ, ಬಯಲುಡುಗೆ, ಸ್ತ್ರೀ (ಸಂ)ವೇದನೆ, ವರ್ಣಕಾವ್ಯ ಮುಂತಾದ ಪದಗಳ ಮೂಲಕ ಈ ಕಲಾವಿಮರ್ಶಾ ಬರೆಹಗಳಿಗೂ ಕಾವ್ಯಸ್ಪರ್ಶ ನೀಡಿರುವ ಬಗೆಯು ಚೇತೋಹಾರಿಯಾಗಿದೆ. ಉದಾಹರಣೆಗೆ ಕೆಲವನ್ನು ಉಲ್ಲೇಖಿಸುವುದಾದರೆ, ಅಮೂರ್ತ ಕಲಾಪಥದ ವಾಸಿಲಿ ಕ್ಯಾಂಡಿನಸ್ಕಿ ಕುರಿತು 'ಸಂಗೀತ ಮತ್ತು ವರ್ಣಚಿತ್ರಗಳೆರಡನ್ನೂ ಒಂದೇ ಆಗಿ ನೋಡುತ್ತಿದ್ದ. ಬಣ್ಣವೇ ಆತನ ಚಿತ್ರಗಳ ಆತ್ಮ' ಎನ್ನುತ್ತಾರೆ. ಎಡ್ವರ್ಡ್ ಮುಂಕ್ ಅವರ ಚಿತ್ರ ನಮ್ಮ ಕಣ್ಣಿಗೆ 'ಕೇಳಿಸುತ್ತದೆ' ಎಂದು ಬರೆಯುತ್ತಾರೆ. ಮೇರಿ ಕ್ಯಾಸೆಟ್ಟರ 'ನೋಟ ತೋಯಿಸಿದ ನೀರು' ಮತ್ತು ವರ್ಮೀಯರ್ ಅವರ 'ಗೌಳಿಗಿತ್ತಿಯ ಮೌನ' ಕೃತಿಗಳು ಸ್ಥಿರಚಿತ್ರವಾಗಿದ್ದೂ ಚಲನೆಯ ಭಾವವನ್ನು ನೋಡುಗನಲ್ಲಿ ಮೂಡಿಸುವಲ್ಲಿ ಸಫಲವಾದ ಬಗೆಯನ್ನು ವಿವರಿಸುತ್ತಾರೆ.

ಅಲ್ಲಲ್ಲಿ ಚಿತ್ರಾನ್ನದಲ್ಲಿ ನಿಂಬೆ ಬೀಜದಂತೆ ಪದಗಳ ಅಪಭ್ರಂಶ ರೂಪಗಳು, ಗೊಂದಲಮಯ